

ಅರುಣ ಪಿ. ಭಟ್ಟ


## ವಾರಭವಿಷ್ಯ: 23.11.2023ರಿಂದ 29.11.2023ರವರೆಗೆ




ಆರಂಭದ ಎರಡು ದಿನಗಳಲ್ಲಿ ಕಾರ್ಯಸಿದ್ಧಿ. ಬಂಧುಗಳ ಆಗಮನದಿಂದ ಕುಟುಂಬದಲ್ಲಿ ಸಂತಸ. ಮನೆ ಬಾಡಿಗೆಯಿಂದ ಧನಲಾಭ. ರಾಜಕೀಯದಲ್ಲಿ ಇದ್ದವರಿಗೆ ಕೈ ತಪ್ಪಿ ಹೋಗುತ್ತಿದ್ದ ಅಧಿಕಾರ ಭದ್ರವಾಗಿ ಉಳಿದುಕೊಳ್ಳುತ್ತದೆ. ಗ್ರಂಥ ರಚನೆಯಲ್ಲಿ ಆಸಕ್ತಿ ಹೆಚ್ಚಾಗುತ್ತದೆ. ವಾಹನ ಸೌಖ್ಯ. ಮಕ್ಕಳಿಂದ ಮಾನಸಿಕ ಕಿರಿಕಿರಿಯನ್ನು ಅನುಭವಿಸಬೇಕಾಗುತ್ತದೆ. ಶುಭದಿನ 27. ಶ್ರೀ ಲಕ್ಷ್ಮೀನರಸಿಂಹ ಪಂಚರತ್ನ ಓದಿರಿ.




ವಾರದ ಪ್ರಾರಂಭದಲ್ಲಿ ಪ್ರವಾಸ ಮುಗಿಸಿಕೊಂಡು ಮನೆಗೆ ಮರಳುತ್ತೀರಿ. ಸಹೋದರಿಯರಿಂದ ಶುಭವಾರ್ತೆಯನ್ನು ಕೇಳುವ ಭಾಗ್ಯ. ಹಸ್ತಾಲಂಕಾರ ವಸ್ತು ಖರೀದಿ. ವಾರದ ಮಧ್ಯದಲ್ಲಿ ಜ್ವರ ಪೀಡೆಗೆ ವೈದ್ಯಕೀಯ ಖರ್ಚು ಹೆಚ್ಚಾಗುತ್ತದೆ. ಕೋರ್ಟ್ ಪ್ರಕರಣದಲ್ಲಿ ಗೆಲುವು. ಅವಮಾನಕರ ಪ್ರಸಂಗ. ವಿವಾಹ ಪ್ರಸ್ತಾವದಲ್ಲಿ ಯಶಸ್ಸು. ವಾರಾಂತ್ಯದಲ್ಲಿ ಪರೋಪಕಾರ. ಶುಭದಿನ 24. ಈಶ್ವರನಿಗೆ ತಿಲಾರ್ಚನೆ ಮಾಡಿರಿ.





ದೈಹಿಕ ಜಾಡ್ಯ ಅಲರ್ಜಿ. ವಿನಾಕಾರಣ ಹೆದರಿಕೆ ನಿಮ್ಮನ್ನು ಬಾಧಿಸಬಹುದು. ಬಹುದಿನಗಳ ನಂತರ ಕುಟುಂಬದಲ್ಲಿ ಸಂತೋಷದ ಸಮಾರಂಭ ನೆರವೇರಲಿದೆ. ಕಲಾವಿದರು ಮತ್ತು ವಿದ್ಯಾರ್ಥಿಗಳಿಗೆ ಇದು ಪರೀಕ್ಷೆಯ ಕಾಲ. ಅವರು ತಮ್ಮ ಗುರಿಯಲ್ಲಿ ಯಶಸ್ಸು ಸಾಧಿಸುತ್ತಾರೆ. ಉತ್ತಮ ವಾಗ್ಮಿ ಪ್ರದರ್ಶನವನ್ನು ಮಾಡಲಿದ್ದೀರಿ. ಸಾಮಾಜಿಕ ಮನ್ನಣೆ, ಸನ್ಮಾನ ನೆರವೇರಲಿದೆ. ಶುಭದಿನ 25. ಕಾರ್ತೀಕೇಯ ಸ್ತೋತ್ರ ಪಠಿಸಿ.





ವಾರದ ಪ್ರಾರಂಭದಲ್ಲಿ ಮನೆಕಟ್ಟುವ ಸಮಸ್ಯೆ ಬಗೆಹರಿಯುವುದು. ಕ್ರಯ ವಿಕ್ರಯದಲ್ಲಿ ವಂಚನೆ ನಡೆಯುವ ಸಂಭವ ಇದೆ, ಜಾಗ್ರತೆ ವಹಿಸುವುದು ಅಗತ್ಯ. ವಾರವಿಡಿ ಒಂದಿಲ್ಲೊಂದು ವಿವಾದದಲ್ಲಿ ಸಿಲುಕುವಿರಿ. ತಂದೆಯಿಂದ ಹಣಕಾಸಿನ ಸಹಾಯ ದೊರೆಯಬಹುದು. ಕಾಲಿಗೆ ನೋವು. ಆಸ್ಪತ್ರೆಗೆ ಅಧಿಕ ಖರ್ಚು. ನಿರೀಕ್ಷಿತ ಸ್ಪರ್ಧೆಯಲ್ಲಿ ಯಶಸ್ಸು. ಶುಭದಿನ 27. ಗುರುದತ್ತಾತ್ರೇಯ ಆರಾಧನೆ ಮಾಡಿರಿ.




ಮಾನಸಿಕ ಉತ್ಸಾಹ ವೃದ್ಧಿಯಾಗುವುದು. ಸರ್ಕಾರಿ ಕೆಲಸಗಳು ತ್ವರಿತಗತಿಯಲ್ಲಿ ನಡೆಯುವುವು. ಪರಿಚಿತ ಸ್ತ್ರೀ ವಿರೋಧವನ್ನು ಎದುರಿಸುವ ಸನ್ನಿವೇಶ ನಿರ್ಮಾಣವಾಗುವ ಸಾಧ್ಯತೆ. ಪಶುಗಳ ವಿಕ್ರಯದಾರರಿಗೆ ಅಧಿಕ ಲಾಭ. ಹೊಟ್ಟೆನೋವಿನ ಪ್ರಸಂಗ. ಅಜ್ಞಾತವಾಸದಿಂದ ಬಿಡುಗಡೆ ಆಗಲಿದ್ದೀರಿ. ನಿಮ್ಮ ಉದ್ಯಮಕ್ಕೆ ಸಂಬಂಧಿಸಿದಂತೆ ಮಹತ್ವದ ಮಾತುಕತೆ ನಡೆಯಲಿದೆ. ಶುಭದಿನ 26. ಹನುಮಾನ್ ಚಾಲೀಸ್ ಪಠಿಸಿರಿ.





ಅನಿರೀಕ್ಷಿತ ಖರ್ಚನ್ನು ಎದುರಿಸಬೇಕಾಗುತ್ತದೆ. ಸರ್ಕಾರಿ ಕೆಲಸದಲ್ಲಿ ವ್ಯತ್ಯಯ ಉಂಟಾಗಬಹುದು. ನಿಮ್ಮ ಸಹಾಯಕರಿಂದ ಹಾನಿಯಾಗುತ್ತದೆ. ಬಂಧು ವರ್ಗದವರಿಗೆ ಆಪತ್ತು ಕಾಡಲಿದೆ. ಮನೆಗೆಲಸ ಅರ್ಧಕ್ಕೆ ನಿಲ್ಲುವುದರಿಂದ ಚಿಂತೆ ಬಾಧಿಸಲಿದೆ. ಪ್ರೀತಿ ಪ್ರೇಮದಲ್ಲಿ ಇರುವ ಜೋಡಿಗಳಲ್ಲಿ ನಿರಾಶೆಯ ಭಾವ ಮೂಡಲಿದೆ. ಅಧಿಕಾರಿಗಳಿಗೆ ತಮ್ಮ ಸ್ಥಾನದಲ್ಲಿ ಹಿನ್ನಡೆ. ಶುಭದಿನ 25. ಉಮಾಮಹೇಶ್ವರ ಪ್ರಾರ್ಥನೆ ಮಾಡಿರಿ.





ವಾರದಲ್ಲಿಯೇ ಉತ್ತಮ ಫಲ ಪ್ರಾಪ್ತಿ ಆಗುತ್ತದೆ. ಇದು ನಿಮ್ಮ ಕುಟುಂಬ ವರ್ಗದಲ್ಲಿ ಖುಷಿಯನ್ನು ಮೂಡಿಸುತ್ತದೆ. ಆಕಸ್ಮಿಕ ಧನಲಾಭದ ಯೋಗ ಇದೆ. ನಿರುದ್ಯೋಗಿಗಳಿಗೆ ಉದ್ಯೋಗ ಸಿಗುವ ಸಾಧ್ಯತೆ ಹೆಚ್ಚಿದೆ. ಸಂತತಿ ನಿರೀಕ್ಷೆಯಲ್ಲಿ ಇರುವ ದಂಪತಿಗೆ ಸಂತಸದ ಸೂಚನೆ. ವಿವಾಹ ಅಪೇಕ್ಷಿತರಿಗೆ ಸಂಗಾತಿಯ ನಿಶ್ಚಯ. ಮನೆಗೆಲಸಕ್ಕೆ ಹೊಸ ಸೇವಕರ ನೇಮಕ. ಶುಭದಿನ 28. ಲಕ್ಷ್ಮೀ ನಾರಾಯಣ ಹೃದಯ ಪಾರಾಯಣ ಮಾಡಿ.





ಸಾಡೆಸಾತಿಯ ಕೊನೆ ಹಂತವನ್ನು ತಲುಪಲಿದ್ದೀರಿ. ಕಷ್ಟದಲ್ಲೂ ಇಷ್ಟ ಫಲ ಪ್ರಾಪ್ತಿಯಾಗುವುದು. ಪರದೇಶ ಪ್ರವಾಸಕ್ಕೆ ಸಿದ್ಧತೆ ನಡೆಸಲಿದ್ದೀರಿ. ಸರ್ಕಾರಿ ಅಧಿಕಾರ ಪ್ರಾಪ್ತವಾಗುವ ಯೋಗವಿದೆ. ಶಿಕ್ಷಕರಿಗೆ ಪದೋನ್ನತಿಯೊಡನೆ ವರ್ಗಾವಣೆ ಸಂಭವ. ಕುಟುಂಬ ವರ್ಗದಲ್ಲಿ ಅನಾರೋಗ್ಯ ಕಾಡಬಹುದು. ಕಂಟಕಗಳಿಂದ ಪ್ರಾಣಾಪಾಯ ಭೀತಿಯನ್ನು ಎದುರಿಸಬೇಕಾಗುತ್ತದೆ. ಶುಭದಿನ 29. ದುರ್ಗಾ ಆರಾಧನೆ ಮಾಡಿರಿ.





ಆರೋಗ್ಯದಲ್ಲಿ ಏರುಪೇರು ಚಿಂತೆಗೆ ಗುರಿ ಮಾಡಲಿದೆ. ಸಂಗಾತಿ ಜೊತೆಗೆ ಜಗಳ ಆಗಬಹುದು. ಕಚೇರಿ ಕಾಗದ ಪತ್ರಗಳು ಹಠಾತ್ ಕಾಣೆಯಾಗಿ ಒತ್ತಡಕ್ಕೆ ಸಿಲುಕುತ್ತೀರಿ. ಅಶುಭವಾರ್ತೆ ಬರಬಹುದು. ದೈನಂದಿನ ಕೆಲಸಗಳು ಸರಾಗವಾಗಿ ನಡೆಯುತ್ತವೆ. ಅಧಿಕಾರಿಗಳ ದಿಢೀರ್ ಭೇಟಿ. ಸ್ತ್ರೀ ಮೂಲಕ ದ್ರವ್ಯ ಲಾಭ. ನಿಮ್ಮ ಮನೆಯಲ್ಲಿ ದೇವತಾ ಪೂಜೆ ನೆರವೇರುವುದು. ಶುಭದಿನ 26. ಗಣಪತಿಗೆ ದೂರ್ವಾರ್ಚನೆ ಮಾಡಿರಿ.




ಅಕಸ್ಮಾತ್ ಪೂರ್ವದಿಕ್ಕಿನಲ್ಲಿ ಅಪಘಾತ ಭಯ ಕಾಡಲಿದೆ. ಕಾಲು ನೋವಿನ ಸಮಸ್ಯೆ ತೀವ್ರವಾಗುವುದರಿಂದ ಗೊಂದಲಕ್ಕೆ ಒಳಗಾಗಬಹುದು. ಕೌಟುಂಬಿಕ ಖರ್ಚು ಜಾಸ್ತಿಯಾಗುವುದು. ಶತ್ರುಗಳು ತಲೆ ತಗ್ಗಿಸುವರು. ಹಳೆಯ ಮಿತ್ರರ ಆಗಮನ. ಮಕ್ಕಳಿಂದ ಶುಭವಾರ್ತೆ ಸಿಗಲಿದೆ. ದಾಂಪತ್ಯದಲ್ಲಿ ಸೌಖ್ಯ. ಹಣಕಾಸಿನ ತೊಂದರೆಗಳಿಗೆ ಪರಿಹಾರವನ್ನು ಸದ್ಯಕ್ಕೆ ಕಂಡುಕೊಳ್ಳಲಿದ್ದೀರಿ. ಶುಭದಿನ 27. ನವಗ್ರಹ ಸ್ತೋತ್ರ ಮಾಡಿರಿ.




ಪ್ರಾರಂಭದಿಂದಲೂ ಶುಭಯೋಗವಿದೆ. ಯಾಂತ್ರಿಕ ವಸ್ತುಗಳನ್ನು ಖರೀದಿ ಮಾಡುತ್ತೀರಿ. ಶೈಕ್ಷಣಿಕ ರಂಗದಲ್ಲಿ ಕೆಲಸ ಮಾಡುವವರಿಗೆ ತಾತ್ಕಾಲಿಕ ಬಡ್ತಿ ಸಿಗಲಿದೆ. ಬ್ಯಾಂಕ್ ನೌಕರರಿಗೆ ವರ್ಗಾವಣೆ ಸಂಭವ. ಕೈಗೊಂಡ ಕೆಲಸಗಳಿಂದ ನಿರೀಕ್ಷೆಗಿಂತ ಅಧಿಕ ಲಾಭ ಸಿಗಲಿದೆ. ಗುತ್ತಿಗೆದಾರರು ಉತ್ತಮ ಲಾಭ ಗಳಿಸಲಿದ್ದೀರಿ. ಮಿತ್ರರಿಂದ ವಂಚನೆ ಸಂಭವ. ಮಕ್ಕಳ ಅನಾರೋಗ್ಯ. ಶುಭದಿನ 25. ನಾಗಫಣಿ ಪೂಜೆ ಕ್ಷೀರಾಭಿಷೇಕ ಮಾಡಿರಿ.




ವಿನಾಕಾರಣ ಮಿತ್ರರು ಶತ್ರುಗಳಾಗುವರು. ಮೇಲಧಿಕಾರಿಗಳಿಂದ ಭಯದ ಸೂಚನೆ ಬರಬಹುದು. ಕಲಾವಿದರು, ಸಂಗೀತಗಾರರಿಗೆ ವಾರದ ಮೊದಲರ್ಧ ಉತ್ತಮ ಯೋಗ. ಸೊಂಟನೋವು ಕಾಣಿಸಬಹುದು. ಮಕ್ಕಳ ಆರೋಗ್ಯದಲ್ಲಿ ಕೊಂಚ ಪ್ರಗತಿ. ವಿದ್ಯಾರ್ಥಿಗಳಿಗೆ ಹಿನ್ನಡೆ. ವಾಹನ ಚಾಲಕರಿಗೆ ಎಚ್ಚರ ಅಗತ್ಯ. ದುಷ್ಟರಿಂದ ಧನಪ್ರಾಪ್ತಿ. ಕುಟುಂಬ ಸೌಖ್ಯ. ಶುಭದಿನ 26. ಲಕ್ಷ್ಮೀನಾರಾಯಣ ಹೃದಯ ಪಾರಾಯಣ ಮಾಡಿರಿ.